# ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

E-mail:Commissioner.pue@gmail.com. * Ph. No.23361857, 23361858* Fax-23361852


ಸಂಖ್ಯೆ:ಪಿಯು/09/ಸಿಬ್ಬಂದಿ/ಸಿಆರ್-3/ಎನ್‌ಓಸಿ/2015-16 ದಿನಾಂಕ: -07-2016.

## ಜ್ಞಾಪನ

**ವಿಷಯ:-** ಕೇಂದ್ರ/ರಾಜ್ಯ ಸರ್ಕಾರ, ವಿಶ್ವವಿದ್ಯಾಲಯ ಹಾಗೂ ಇತರೆ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:-** ಜಿಲ್ಲಾ ಉಪನಿರ್ದೇಶಕರು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರ ಪತ್ರಗಳು..

-*-

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹುದ್ದೆಗಳು, ವಿಶ್ವವಿದ್ಯಾಲಯದ ಸಹ/ಸಹಾಯಕ ಪ್ರಾಧ್ಯಾಪಕ ಹುದ್ದೆಗಳು ಹಾಗೂ ಇತರೆ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪತ್ರ ನೀಡುವಂತೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳು/ ಪ್ರ.ದ.ಸ/ದ್ವಿ.ದ.ಸ ಹಾಗೂ ಇತರೆ ಸಿಬ್ಬಂದಿ ವರ್ಗದವರು ಜಿಲ್ಲಾ ಉಪನಿರ್ದೇಶಕರ / ಪ್ರಾಂಶುಪಾಲರುಗಳ ಮುಖೇನ ಉಲ್ಲೇಖಿತ ಪತ್ರಗಳಲ್ಲಿ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಉಪನ್ಯಾಸಕರುಗಳು ಹಾಗೂ ಇತರೆ ಸಿಬ್ಬಂದಿ ವರ್ಗದವರ ಹೆಸರಿನ ಮುಂದೆ ತೋರಿಸಿರುವ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಷರತ್ತಿಗೊಳಪಟ್ಟು ಅನುಮತಿ ನೀಡಬಹುದಾಗಿದೆ:

| ಕ್ರಸ | ಹೆಸರು ಮತ್ತು ಕಾಲೇಜು ವಿಳಾಸ<br>ಶ್ರೀಮತಿ/ಶ್ರೀ | ಅನುಮತಿ ಕೋರಲಾದ ಹುದ್ದೆ |
|---|---|---|
| 1 | ರವಿ.ಎಸ್.<br>ಜೀವಶಾಸ್ತ್ರ ಉಪನ್ಯಾಸಕರು,<br>ಸರ್ಕಾರಿ ಪದವಿ ಪೂರ್ವ ಕಾಲೇಜು,<br>ಜಲಾಲಪೂರ, ರಾಯಬಾಗ ತಾ, ಬೆಳಗಾವಿ ಜಿಲ್ಲೆ. | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹುದ್ದೆಗೆ |
| 2 | ರಾಘವೇಂದ್ರ.ಜಿ.ಎಂ.<br>ರಸಾಯನಶಾಸ್ತ್ರ ಉಪನ್ಯಾಸಕರು,<br>ಸರ್ಕಾರಿ ಪದವಿ ಪೂರ್ವ ಕಾಲೇಜು, ಮಿರ್ಲೆ,<br>ಕೆ.ಆರ್.ನಗರ ತಾ, ಮೈಸೂರು ಜಿಲ್ಲೆ. | ಮೈಸೂರು ವಿಶ್ವವಿದ್ಯಾಲಯದಲ್ಲಿನ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ. |
| 3 | ರವಿಕುಮಾರ್,<br>ಗಣಿತಶಾಸ್ತ್ರ ಉಪನ್ಯಾಸಕರು,<br>ಸರ್ಕಾರಿ ಪದವಿ ಪೂರ್ವ ಕಾಲೇಜು,<br>ಜಿಲ್ಲೆ. | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹುದ್ದೆಗೆ |
| 4 | ರವಿ.ಟಿ.ಕೆ.<br>ಸಮಾಜಶಾಸ್ತ್ರ ಉಪನ್ಯಾಸಕರು,<br>ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು,<br>ನಂಜನಗೂಡು, ಮೈಸೂರು ಜಿಲ್ಲೆ. | ಮೈಸೂರು ವಿಶ್ವವಿದ್ಯಾಲಯದಲ್ಲಿನ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ. |
| 5 | ಬಿ.ಎಂ. ಗೀತಾ,<br>ಭೂಗೋಳಶಾಸ್ತ್ರ ಉಪನ್ಯಾಸಕರು,<br>ಸರ್ಕಾರಿ ಪದವಿ ಪೂರ್ವ ಕಾಲೇಜು, ಹುಣಸೂರು,<br>ಮೈಸೂರು ಜಿಲ್ಲೆ. | ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ, ಇಲ್ಲಿನ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ. |

ಷರತ್ತುಗಳು:

1. ಸದರಿ ಸಿಬ್ಬಂದಿಗಳು, ಪರೀಕ್ಷೆಗೆ ಸಂಬಂಧಿಸಿದಂತೆ ಅಧ್ಯಯನವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕೈಗೊಳ್ಳತಕ್ಕದ್ದು. ಸಿಬ್ಬಂದಿಗಳು, ಸದರಿ ಪರೀಕ್ಷೆಯ ಅಧ್ಯಯನದ ನಿಮಿತ್ತ ಸರ್ಕಾರ/ಇಲಾಖೆಗೆ ಯಾವುದೇ ಆರ್ಥಿಕ ಹೊರೆ ಉಂಟಾಗತಕ್ಕದ್ದಲ್ಲ.
2. ಸದರಿ ಸಿಬ್ಬಂದಿಗಳು/ಉಪನ್ಯಾಸಕರುಗಳು, ವಿದ್ಯಾರ್ಥಿಗಳ ಪಾಠ-ಪ್ರವಚನಗಳಿಗೆ ತೊಂದರೆ ಉಂಟಾಗದಂತೆ ಬಿಡುವಿನ ವೇಳೆಯಲ್ಲಿ, ಪರೀಕ್ಷೆಯ ಅಧ್ಯಯನಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳತಕ್ಕದ್ದು.
3. ಸದರಿ ಸಿಬ್ಬಂದಿಗಳು ಸದರಿ ಪರೀಕ್ಷೆಯ ಅಧ್ಯಯನದ ನಿಮಿತ್ತ ವರ್ಗಾವಣೆ ಕೋರುವಂತಿಲ್ಲ ಅಥವಾ ಅವರ ಪರೀಕ್ಷೆಯ ಅಧ್ಯಯನ ಸರ್ಕಾರದ/ಇಲಾಖೆಯ ವರ್ಗಾವಣೆಗೆ ಅಡ್ಡಿ ಬರುವಂತಿಲ್ಲ.
4. ಸದರಿ ಸಿಬ್ಬಂದಿಗಳು /ಉಪನ್ಯಾಸಕರುಗಳು ಬೇರೆ ಯಾವುದೇ ಇಲಾಖೆಯ ಹುದ್ದೆಗೆ ಆಯ್ಕೆಯಾದಲ್ಲಿ, ಈಗ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಹುದ್ದೆಯಿಂದ ಬಿಡುಗಡೆ ಹೊಂದುವ ಮೊದಲು ಇಲಾಖೆಯ ಅನುಮತಿ ಪಡೆಯತಕ್ಕದ್ದು.

ಜಂಟಿ ನಿರ್ದೇಶಕರು(ಆಡಳಿತ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರಿಗೆ.
2. ಸಹಾಯಕ ನಿರ್ದೇಶಕರು, ಇ-ಆಡಳಿತ, ಪಪೂಶಿಇ, ಬೆಂಗಳೂರು.
3. ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ಹಾಗೂ
4. ಕಛೇರಿ ಪ್ರತಿ.